

# ಏಡಿಗಳ ಮಹಾ ವಲಸೆ



ಕ್ಯೂಬಾದ ಬೇ ಆಫ್ ಪಿಗ್ಸ್ ಅಂದರೆ ಹಸಿರು ವರ್ಣದ ಜಲ, ಹವಳದ ದಿಬ್ಬಗಳು, ಆಳ ಸಮುದ್ರದ ಜಲಚರಗಳಿಗೆ ಮಾತ್ರ ಹೆಸರುವಾಸಿಯಲ್ಲ, ಪ್ರತಿ ವರ್ಷ ಒಂದು ವಿಚಿತ್ರ ವಿದ್ಯಮಾನಕ್ಕೆ ಸಾಕ್ಷಿಯಾಗುತ್ತದೆ. ಈ ಪ್ರದೇಶದಲ್ಲಿ ವಸಂತದ ಮೊದಲ ಮಳೆ ಸುರಿದರೆ ಸಾಕು, ಸುತ್ತಮುತ್ತಲಿನ ಅರಣ್ಯದಿಂದ ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಕೆಂಪು, ಹಳದಿ, ಕಪ್ಪು ರಂಗಿನ ಏಡಿಗಳು ಕಡಲಿಗೆ ಮುತ್ತಿಗೆ ಹಾಕುವ ರೀತಿಯಲ್ಲಿ ಸವಾರಿ ಹೊರಡುತ್ತವೆ. ಹಾಗೆ ತೆರಳುವಾಗ ಮಾರ್ಗದಲ್ಲೆಲ್ಲ ಅನಾಹುತ ಸೃಷ್ಟಿಸುತ್ತ ಸಾಗುತ್ತವೆ.

ಹಗಲು– ರಾತ್ರಿಯೆನ್ನದೆ ಪಯಣ ಬೆಳೆಸುವ ಇವು ದಾರಿಯಲ್ಲಿ ಸಿಗುವ ಮನೆಗಳಿಗೆ ನುಗ್ಗುತ್ತವೆ, ಉಪಾಹಾರಗೃಹಗಳ ಅಡುಗೆ ಪಾತ್ರೆಗಳಿಗೆಲ್ಲ ಬಿದ್ದು ಚೊಂಯ್ ಎನ್ನುತ್ತವೆ, ರಸ್ತೆಯಲ್ಲಿ ಸಾಗುವ ವಾಹನಗಳಿಗೆ ಸಿಕ್ಕು ಸುತ್ತೆಲ್ಲ ಕೆಟ್ಟ ವಾಸನೆ ಹರಡುತ್ತವೆ, ಹಾಗೆ ತುಂಡಾದ ಚಿಪ್ಪು ಚುಚ್ಚಿ ವಾಹನಗಳ ಟೈರ್‌ಗಳೆಲ್ಲ ತೂತು ಬೀಳುತ್ತವೆ.

ಅರೆ, ಕಣ್ಣೆದುರೇ ಸ್ವಾದಿಷ್ಟ ಮಾಂಸವಿರುವಾಗ ಹೊಟ್ಟೆಗೆ ಸೇರಲು ಏಕೆ ತಡ ಎಂದು ಬಾಯಲ್ಲಿ ಲಾಲಾರಸ ಹರಿಸಬೇಡಿ. ಇವು ವಿಷಕಾರಿ ಏಡಿಗಳಂತೆ. 10 ಕಾಲುಗಳ ಈ ಕಠಿಣಚರ್ಮಿ ಅಥವಾ ವಲ್ಕವಂತ (ಕ್ರಷ್ಟೇಷಿಯ) ಕಡಲಿಗೆ ವಲಸೆ ಹೊರಡುವುದು ಮೊಟ್ಟೆಯಿಡಲು. ಒಮ್ಮೆ ವಯಸ್ಕ ಏಡಿಗಳು ತಮ್ಮ ಕೆಲಸ ಮುಗಿದ ನಂತರ ಅರಣ್ಯಕ್ಕೆ ಮರಳುತ್ತವೆ. ಇಷ್ಟಕ್ಕೇ ಮುಗಿಯುವುದಿಲ್ಲ, ಒಂದೆರಡು ತಿಂಗಳುಗಳ ನಂತರ ಸಮುದ್ರದಿಂದ ಮರಿ ಏಡಿಗಳ ಮಹಾ ಪಯಣ ಶುರುವಾಗುತ್ತದೆ.

ಏಡಿಗಳಿಗೆ ಈ ವಲಸೆ ಜೀವಕ್ಕೆ ಕುತ್ತು ತಂದರೆ, ಸ್ಥಳೀಯ ನಿವಾಸಿಗಳಿಗೆ ಕಾಸು ಮಾಡುವ ಕಾಲ. ಕಡಲಗುಂಟ ಇರುವ ರಸ್ತೆಗಳಲ್ಲಿ ಸಾಗುವ ಬಹುತೇಕ ಎಲ್ಲಾ ವಾಹನಗಳ ಟೈರ್‌ಗೆ ಇವುಗಳ ಚಿಪ್ಪು, ಕೊಂಬು ಚುಚ್ಚಿ ತೂತು ಬೀಳುವುದು ಸಾಮಾನ್ಯವಂತೆ. ಸ್ಥಳೀಯವಾಗಿ ಅಗ್ಗವಾಗಿ ಲಭ್ಯವಿರುವ ಕಾಂಡೋಮ್‌ಗಳನ್ನೇ ಬಳಸಿ ತೇಪೆ ಹಚ್ಚಿ ಪುಡಿಗಾಸು ಸಂಪಾದಿಸುವ ಕೆಲಸ ಜೋರಾಗೇ ನಡೆಯುತ್ತದಂತೆ. ಈ ಏಡಿಗಳ ವಲಸೆ ಕ್ಯೂಬಾದ ಇತರ ಪ್ರದೇಶಗಳಲ್ಲಲ್ಲದೇ, ಆಸ್ಟ್ರೇಲಿಯಾದಲ್ಲೂ ನಡೆಯುತ್ತದೆ.

■ ಎಸ್.ಹೆಗಡೆ

